## ಕರ್ನಾಟಕ ಸರ್ಕಾರ

## 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.

**ಸಿ.ಸಿ.ನಂ.2200/2022**

ಪಿ.ಡಬ್ಲ್ಯೂಃ **8**

ಸಿ.ಡಬ್ಲ್ಯೂಃ 15

| | | |
|---|---|---|
| ಹೆಸರು | ಃ | ಈಶ್ವರ್ |
| ತಂದೆಯ ಹೆಸರು | ಃ | ನಾರಾಯಣ |
| ವಯಸ್ಸು | ಃ | 62 ವರ್ಷ |
| ಉದ್ಯೋಗ | ಃ | ವಾಹನ ನಿರೀಕ್ಷರು |
| ವಾಸಸ್ಥಳ | ಃ | ತರೀಕೆರೆ |

ಸಾಕ್ಷಿಯ ವೀಡಿಯೋ ಕಾನ್ಫರೆನ್ಸ್ ಮೂಲಕ ನ್ಯಾಯಲಯದ ಮುಂದೆ ಹಾಜರಾಗಿರುತ್ತಾರೆ.

**ದಿನಾಂಕಃ 24-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಮುಖ್ಯ ವಿಚಾರಣೆ ಃ** ಸಹಾಯಕ ಸರ್ಕಾರಿ ಅಭಿಯೋಜಕರರಿಂದ

ನಾನು ದಿಃ **26-06-2016** ರಿಂದ **28-02-2025** ತನಕ ತರೀಕೆರೆಯ ಆರ್ ಟಿ ಓ ಕಛೇರಿಯಲ್ಲಿ ವಾಹನ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 19-05-2022 ರಂದು ಚಾಸಾ-21 ರವರ ಮನವಿ ಮೇರೆಗೆ ಬೆಳಿಗ್ಗೆ 11-00 ಗಂಟೆಗೆ ಲಕ್ಕವಳ್ಳಿ ಠಾಣಾ ಆವರಣಕ್ಕೆ ಭೇಟಿ ಕೊಟ್ಟು ಕೆಎ 14 ಇ ಯು 3503 ರ ಮೋಟಾರ್ ಸೈಕಲ್ ನ್ನು ವಾಹನವನ್ನು ಪರೀಕ್ಷೆ ಮಾಡಿ ತಪಾಸಣೆಗೆ ಒಳಪಡಿಸಿದ್ದು, ಸದರಿ ವಾಹನಕ್ಕೆ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ.

1. ಮುಂದಿನ ಎಡಬದಿಯ ಕ್ಲಚ್ ಕೇಬಲ್ ಹೊಲ್ಡಿಂಗ್ ಹೊಡೆದುಹೋಗಿತ್ತು

ನಾನು ಸದರಿ ವಾಹನವನ್ನು ನಿಂತಲ್ಲೇ ಪರೀಕ್ಷೆ ಮಾಡಿದಾಗ ಸದರಿ ವಾಹನದ ಬ್ರೇಕ್ ವ್ಯವಸ್ಥೆ ಸರಿಯಾಗಿದ್ದು, ಸದರಿ ಅಪಘಾತವು ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂಬುದಾಗಿ ವರದಿಯನ್ನು ಸಲ್ಲಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಸದರಿ ಐ ಎಂ ವಿ ವರದಿಯಾಗಿದ್ದು, ಅದನ್ನು ನಿಪಿ-11 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ-11(ಎ) ಮತ್ತು ನಿಪಿ-11(ಬಿ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿತರ ಪರ</u>** <u>ಶ್ರೀ ಜೆ ಟಿ ಜೆ</u> **<u>ವಕೀಲರಿಂದ.</u>**

ವಾಹನದ ಮುಂದಿನ ಬಂಪರ್ ಆಗಲೀ, ಮಡ್ ಗಾರ್ಡ ಗೆ ಆದಲೀ ಯಾವುದೇ ಹೊಡೆತ ಬಿದ್ದಿರುವುದಿಲ್ಲ ಎಂದರೆ ಸರಿ.

**<u>ಮರುವಿಚಾರಣೆ</u>:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**